ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ಅಡಿಕೆ ಟಾಸ್ಕ್ ಫೋರ್ಸ್ ಕುರಿತು

ಶ್ರೀ ಎನ್. ರವಿಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು):-

1576 (1861) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಡಿಕೆ ಬೆಳೆಗಾರರ ಸಮಸ್ಯೆ ಪರಿಹರಿಸಲು ಟಾಸ್ಕ್ ಫೋರ್ಸ್ ರಚಿಸಲಾಗಿದೆಯೇ ; ರಚಿಸಲಾಗಿದ್ದಲ್ಲಿ, ಯಾವಾಗಿನಿಂದ ಅಸ್ತಿತ್ವಕ್ಕೆ ಬಂದಿದೆ ;

(ಆ) ಅಡಿಕೆ ಟಾಸ್ಕ್ ಫೋರ್ಸ್ ರಚನೆಯ ಉದ್ದೇಶ ಮತ್ತು ಕಾರ್ಯಸೂಚಿಗಳೇನು ;

(ಇ) ಅಡಿಕೆ ಬೆಳೆಯಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಮೊತ್ತದ ಆದಾಯ ಬರುತ್ತದೆ ; ಅಡಿಕೆ ಟಾಸ್ಕ್ ಫೋರ್ಸ್‌ಗೆ ಒದಗಿಸಲಾಗಿರುವ ಅನುದಾನ ಎಷ್ಟು ; ಈ ಮೊತ್ತವ ನ್ನು ಯಾವ ಯಾವ ಕಾರ್ಯಗಳಿಗೆ ವೆಚ್ಚ ಮಾಡಲಾಗುತ್ತದೆ ?